ಸಿಸಿ.ನಂ.650/2024
ಪಿ ಡಬ್ಲ್ಯೂ-1

<u>ದಿ:**24.04.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋದಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲು</u>:- ಆರೋಪಿ ಪರ N.R.T., ವಕೀಲರಿಂದ:-

ನಾನು ಕೆಳಗೋಟೆ ಗ್ರಾಮದಲ್ಲಿ ವಾಸ ಇರುತ್ತೇನೆ . ಕೆಳಗೋಟೆ ಗ್ರಾಮದಿಂದ ಜಗಳೂರು ಪಟ್ಟಣ 9 ಕಿಮಿ ಅಂತರ ಇರುತ್ತದೆ . ನಾನು ಪ್ರತಿವಾದಿ ಕೆಳಗೋಟೆ ಗ್ರಾಮದಿಂದ ಜಗಳೂರು ಪಟ್ಟಣಕ್ಕೆ ನನ್ನ ಮೋಟಾರ್ ಸೈಕಲ್ ಅಲ್ಲಿ ಓಡಾಡುತ್ತೇನೆ . ನಾನು ಕಾರ್ತಿಕ್ ಗ್ರೀನ್ಸ್ ಕಛೇರಿಗೆ ವಾರಕ್ಕೆ ಮೂರು ಬಾರಿ ಬರುತ್ತೇನೆ . ನಾನು ಕಾರ್ತಿಕ್ ಗ್ರೀನ್ಸ್ ಕಛೇರಿಯಲ್ಲಿ ಮ್ಯಾನೇಜರ್ ಆಗಿರುತ್ತೇನೆ . ನಾನು ಕಛೇರಿಯಲ್ಲಿ ಎಲ್ಲಾ ಕೆಲಸಗಾರರ ನಿರ್ವಹಣೆ ಮಾಡುತ್ತೇನೆ ಮತ್ತು ಬರವಣಿಗೆ ಮತ್ತು ಅಕೌಂಟ್ಸ್ ನಾನೇ ನೋಡಿಕೊಳ್ಳುತ್ತೇನೆ . ಆರೋಪಿಯು ಮುಷ್ಟೂರು ಗ್ರಾಮದವರು ಇರುತ್ತಾರೆ ಎಂದರೆ ಸಾಕ್ಷಿ ನನಗೆ ಸನ್ **2014** ರಲ್ಲಿ ಪರಿಚಯ ಆಗಾದ ಸುಳದಹಳ್ಳಿ ಗ್ರಾಮದಲ್ಲಿ ಇದ್ದರು ಎಂದು ಹೇಳುತ್ತಾರೆ **.** ಸನ್ **2014** ರಲ್ಲಿ ನಾನು ಮತ್ತು ಆರೋಪಿಯು ಐ ಟಾಪ್ ಕಂಪನಿಯಲ್ಲಿ ಸಹಪಾಠಿಗಳಾಗಿ ಕೆಲಸ ಮಾಡುತ್ತಿದ್ದೇವು **.** ನಂತರ ನಾನು ಜಗಳೂರು ಪಟ್ಟಣದಲ್ಲಿ ಕಾರ್ತಿಕ್ ಗ್ರೀನ್ಸ್ ಮಾಲೀಕರಾದ ಮಂಜುನಾಥ ಅವರೊಂದಿಗೆ ಸೇರಿಕೊಂಡಿರುತ್ತೇನೆ ಎಂದರೆ ಸರಿ. ಆರೋಪಿಯು ನಂತರ ಮಂಜುನಾಥ ಅವರೊಂದಿಗೆ ವ್ಯವಹಾರ ಮಾಡಲು ಅಗ್ರಿಮೆಂಟ್ ಮಾಡಿಕೊಂಡಿರುತ್ತಾರೆ . ಸದರಿ ಅಗ್ರಿಮೆಂಟ್ ನನ್ನ ಬಳಿ ಇರುವುದಿಲ್ಲ . ಸದರಿ ಅಗ್ರಿಮೆಂಟ್ ಕೇವಲ ಮಂಜುನಾಥ ಮತ್ತು ಆರೋಪಿ ನಡುವೆ ಆದ ಕಾರಣ ನನಗೆ ಸಂಬಂದ ಇರುವುದಿಲ್ಲ . ನನಗೆ ಪ್ರತಿದಿನ ಜಗಳೂರು ಪಟ್ಟಣಕ್ಕೆ ಬರಲು ರೂ. 100 ಖರ್ಚು ಇರುತ್ತದೆ . ತಿಂಗಳಿಗೆ ನನಗೆ 3-4 ಸಾವಿರ ವೈಯಕ್ತಿಕ ಖರ್ಚು ಇರುತ್ತದೆ ಎಂದರೆ ಸರಿ. ನಮ್ಮ ತಂದೆ ತಾಯಿ ವೈದ್ಯಕೀಯ ಖರ್ಚಿಗೆ ತಿಂಗಳಿಗೆ 2-3 ಸಾವಿರ ಬೇಕಾಗುತ್ತದೆ ಎಂದರೆ ಸರಿ. ಆರೋಪಿಯಿಯು ನನ್ನಿಂದ 7.5 ಲಕ್ಷ ಹಣ ಪಡೆಯುವಾಗ ತಮ್ಮ ಮನೆ ಖರ್ಚಿಗೆ ಬೇಕೆಂದು ಸಾಲವನ್ನುಪಡೆದುಕೊಂಡಿರುತ್ತಾರೆ . ಆರೋಪಿಯು ಸೌತೆಕಾಯಿ, ಚೆಂಡುಹೂವು ಕಂಪನಿಯಲ್ಲಿ ವ್ಯವಹಾರ ಮಾಡುತ್ತಾರೆ . ಮಂಜುನಾಥ ಅವರು ಆರೋಪಿಯೊಂದಿಗೆ ಸೌತೆಕಾಯಿ ವ್ಯವಹಾರ ಮಾಡಿರುತ್ತಾರೆ. ಸಾಮಾನ್ಯವಾಗಿ ಹಣಕಾಸಿನ ವ್ಯವಹಾರ ಮಾಡುವಾಗ ಭದ್ರತೆಗಾಗಿ ದಾಖಲೆಗಳನ್ನು ಪಡೆದುಕೊಳ್ಳುತ್ತಾರೆ ಎಂದರೆ ಸರಿ. ಭೀಜ ಮತ್ತು ಗೊಬ್ಬರ ಔಷದಿಗಳನ್ನು ರೈತರಿಗೆ ಸರಬರಾಜು ಮಾಡಲು

ಆರೋಪಿಯು ಮಂಜುನಾಥ ಬಳಿ ಪಡೆದುಕೊಂಡು ಹೋಗಿರುತ್ತಾರೆ ಎಂದರೆ ಸರಿ. ನಾನು ಸದರಿ ವ್ಯವಹಾರದಲ್ಲಿ ಕಛೇರಿಯಲ್ಲಿ ಮ್ಯಾನೇಜರ್ ಆದ ಕಾರಣ ಆರೋಪಿಯ ವ್ಯವಹಾದ ಲೆಕ್ಕ ಪುಸ್ತಕಗಳನ್ನು ಬರೆಯುತ್ತಿದ್ದೇ ಎಂದರೆ ಸರಿ. ಈಗ ಸಾಕ್ಷಿಗೆ ರಶೀದಿಗಳನ್ನು ತೋರಿಸಿ ಸದರಿ ರಶೀದಿಗಳು ನಮ್ಮ ಕಂಪನಿಗೆ ಆರೋಪಿ ನೀಡಿದ ರಶೀದಿ ಎಂದು ತೋರಿಸಿದಾಗ ಒಪ್ಪಿರುತ್ತಾರೆ ಹಾಗೂ ಸದರಿ ರಶೀದಿಯಲ್ಲಿರುವ ಸಹಿಗಳನ್ನು ತಮ್ಮದು ಎಂದು ಒಪ್ಪಿರುತ್ತಾರೆ . ಸಾಕ್ಷಿ ಒಪ್ಪಿದ ರಶೀದಿಯ ಪ್ರತಿಗಳನ್ನು ಕ್ರಮವಾಗಿ ನಿಡಿ 1 ರಿಂದ 6 ಎಂದು ಗುರುತಿಸಲಾಯಿತು. ನಿಡಿ 3 ರಿಂದ 6 ದಾಖಲೆಯಲ್ಲಿರುವ ಸಹಿನನ್ನದೇ ಇರುತ್ತದೆ ಎಂದರೆ ಸರಿ. ಸದರಿ ಸಹಿಗಳನ್ನು ನಿಡಿ 3(ಎ) ರಿಂದ 6(ಎ) ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ನಮ್ಮ ಕಛೇರಿಯ ISSUE SLIP ತೋರಿಸಿದ್ದು ಸದರಿ ದಾಖಲೆಯನ್ನು ತಾನೇ ಬರೆದಿದ್ದು ಎಂದು ಒಪ್ಪಿಕೊಂಡಿರುತ್ತಾರೆ . ಸಾಕ್ಷಿ ಒಪ್ಪಿದ ISSUE SLIP ಪ್ರತಿಗಳನ್ನು ಕ್ರಮವಾಗಿ ನಿಡಿ 7 ರಿಂದ 13 ಎಂದು ಗುರುತಿಸಲಾಯಿತು ಮತ್ತು ಸಾಕ್ಷಿಯ ಸಹಿಯನ್ನು ನಿಪಿ 7 (ಎ) ರಿಂದ 13(ಎ) ಎಂದು ಗುರುತಿಸಲಾಯಿತು. ನಿಪಿ 1 ರಲ್ಲಿ ಕಾಣುವ ಬರವಣಿಗೆ ಆರೋಪಿ ಬರೆದಿರುತ್ತಾರೆ . ನಿಪಿ 1 ಚೆಕ್ ನಲ್ಲಿ ಕಾಣುವ ಮೊತ್ತದ ಶಾಹಿ ಮತ್ತು ಬರವಣಿಗೆ ಶಾಹಿ ( INK ) ಒಂದೇ ಇರುತ್ತದೆ ಎಂದರೆ ಸರಿ. ನಿಪಿ 1 ರಲ್ಲಿರುವ ಆರೋಪಿಯ ಸಹಿಯ ಶಾಹಿಯು ಮತ್ತು ಉಳಿದ ಬರವಣಿಗೆಯು ಬೇರೆ ಇರುತ್ತದೆ ಎಂದರೆ ಸರಿಯಲ್ಲ. ನಾನು ಮತ್ತು ಆರೋಪಿಯು ಈ ಪ್ರಕರಣ ದಾಖಲಾಗುವರೆಗೂ ತುಂಬಾ ವಿಶ್ವಾಸದಲ್ಲಿ ಇದ್ದೇವು ಎಂದರೆ ಸರಿ. ನಾನು ಈ ಪ್ರಕರಣ ದಾಖಲಾಗುವ ಪೂರ್ವದಲ್ಲಿ ಬಹಳ ಸಾರಿ ಆರೋಪಿಯನ್ನು ಕೇಳಿರುತ್ತೇನೆ . ನಾನು ಆರೋಪಿಯ ಗ್ರಾಮಕ್ಕೆ ಹೋಗಿ ಹಣ ನೀಡಲು ಕೇಳಿರುವುದಿಲ್ಲ . ಈ ಪ್ರಕರಣದ ದಾಖಲಾಗುವ ಪೂರ್ವದಲ್ಲಿ ಆರೋಪಿಯು ರಾಜೀ ಮಾಡಿಕೊಳ್ಳಲು ಕರೆದಾಗ ನಾನು ಮಂಜುನಾಥ ಅವರೊಂದಿಗೆ ಮಾತನಾಡಿ ರಾಜೀ ಮಾಡಿಕೊಳ್ಳುವುದಾಗಿ ತಿಳಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯು ಮಂಜುನಾಥ ಅವರೊಂದಿಗೆ ವ್ಯವಹಾರ ಮಾಡುವಾಗ ನಿಪಿ **1** ಖಾಲಿ ಚೆಕ್ ಅನ್ನು ಭದ್ರತೆಗೆ ಪಡೆದುಕೊಂಡಿರುತ್ತಾರೆ ಎಂದರೆ ನನಗೆ ಗೋತ್ತಿಲ್ಲ **.** ಈ ಹಿಂದೆ ಮಂಜುನಾಥ ಅವರು ನಿಪಿ 1 ಚೆಕ್ ನ ಆಧಾರದ ಮೇಲೆ ನಮ್ಮ ವಕೀಲರಿಂದ

ಆರೋಪಿಗೆ ನೋಟೀಸ್ ಕಳುಹಿಸಲು ಹೋಗಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಕೀಲರು ಮಂಜುನಾಥ ಅವರ ಕಛೇರಿಯ ಆಡಿಟ್ ರಿಪೋರ್ಟ್ ಕೇಳಿರುತ್ತಾರೆ ಎಂದರ ನನಗೆ ಗೋತ್ತಿಲ್ಲ . ಆದ ಕಾರಣ ಮಂಜುನಾಥ ಅವರು ಪ್ರಕರಣ ದಾಖಲು ಮಾಡಲು ಆಗದೇ ಇರುವ ಕಾರಣ ನನ್ನಮೂಲಕ ಆರೋಪಿ ವಿರುದ್ಧ ಈ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ನಿಪಿ 1 ರಲ್ಲಿ ಕಾಣುವ ಬರವಣಿಗೆ ಆರೋಪಿಯದ್ದು ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಅವಿದ್ಯಾವಂತ ಇರುವ ಕಾರಣ ಅವರಿಗೆ ತೊಂದರೆ ನೀಡಲು ನಾನು ಮತ್ತು ಮಂಜುನಾಥ ಅವರು ನಿಪಿ 1 ಚೆಕ್ ಅನ್ನು ದುರುಪಯೋಗ ಪಡಿಸಿಕೊಂಡು ಈ ಪ್ರಕರಣ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಯು ನಮ್ಮ ಕಛೇರಿಗೆ ಬಂದು ನಿಪಿ 1 ಚೆಕ್ ಅನ್ನು ಬಹಳ ಸಾರಿ ವಾಪಸ್ ನೀಡಲು ಕೇಳಿರುತ್ತಾರೆ ಎಂದರೆ ಸಾಕ್ಷಿ ಮಂಜುನಾಥ ಅವರನ್ನು ಕೇಳಿರುತ್ತಾರೆ ಎಂದು ಹೇಳುತ್ತಾರೆ. ನನಗೂ ನಿಪಿ 1 ಚೆಕ್ ಗೂ ಯಾವುದೇ ಸಂಬಂದ ಇರುವುದಿಲ್ಲ . ನಾನು ಆರೋಪಿಯ ಚೆಕ್ ಅನ್ನು ದುರುಪಯೋಗ ಪಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಆರೋಪಿಗೆ ಯಾವುದೇ ಹಣವನ್ನು ಸಾಲದ ರೂಪದಲ್ಲಿ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಇದೇ ನ್ಯಾಯಾಲಯ ಸಿಸಿ **1536/2024** ರಂತೆ ಕಲ್ಲಪ್ಪ ಎಂಬುವವರ ವಿರುದ್ಧ ಚೆಕ್ ಅಮಾನತು ಪ್ರಕರಣ ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ ಪ್ರಕರಣ ಚಾಲ್ತಿಯಲ್ಲಿರುತ್ತದೆ ಎಂದರೆ ಸರಿ.

ಮರು ವಿಚಾರಣೆ: ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಇದೆ

ಸಹಿ/-

ಸಿವಿಲ್ ನ್ಯಾಯಾಧೀಶರು, ಜಗಳೂರು